ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]
Total No. of Questions : 38 ]

**A**

**CCE RF**
**CCE RR**

Question Paper Serial No. **101**

ಇಲ್ಲಿಂದ ಕತ್ತರಿಸಿ

**ಸಂಕೇತ ಸಂಖ್ಯೆ : 85-K**

**Code No. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

ದಿನಾಂಕ : 06. 04. 2022 ] [ Date : 06. 04. 2022
ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.
ಗರಿಷ್ಠ ಅಂಕಗಳು : 80 ] [ Max. Marks : 80

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

Tear here

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 8 × 1 = 8**

1. ಭಾರತ ಮತ್ತು ಯುರೋಪ್ ನಡುವೆ ಹೊಸ ಜಲಮಾರ್ಗವನ್ನು ಕಂಡುಹಿಡಿದವನು

   (A) ಕೊಲಂಬಸ್

   (B) ವಾಸ್ಕೋಡ ಗಾಮ

   (C) ಅಲ್ಮೇಡ

   (D) ಅಲ್ಬುಕರ್ಕ್

2. ಅಲಿ ಸಹೋದರರು ಮುನ್ನಡೆಸಿದ ಚಳವಳಿ

   (A) ಅಸಹಕಾರ

   (B) ಖಿಲಾಫತ್

   (C) ಕಾನೂನು ಭಂಗ

   (D) ಕ್ವಿಟ್ ಇಂಡಿಯಾ

3. ವಿಶ್ವದ ಯಾವುದೇ ಶಕ್ತಿ ಬಣಕ್ಕೂ ಸೇರದೆ ಇರುವ ನೀತಿ

(A) ಅಲಿಪ್ತ

(B) ವರ್ಣಭೇದ ವಿರೋಧಿ

(C) ವಸಾಹತು ಶಾಹಿತ್ವಕ್ಕೆ ವಿರೋಧ

(D) ನಿಶ್ಶಸ್ತ್ರೀಕರಣ

4. ಇವುಗಳಲ್ಲಿ ಸಂಭಾವನೆರಹಿತ ದುಡಿಮೆಗೆ ಉತ್ತಮ ಉದಾಹರಣೆ

(A) ದಾದಿ

(B) ಶಿಕ್ಷಕಿ

(C) ಗೃಹಿಣಿ

(D) ಪೊಲೀಸ್

5. ಡಾ. ಬಿ.ಆರ್. ಅಂಬೇಡ್ಕರವರು ಪ್ರಾರಂಭಿಸಿದ ಪತ್ರಿಕೆ

(A) ಕೇಸರಿ

(B) ಮೂಕನಾಯಕ

(C) ಮರಾಠಾ

(D) ಬಾಂಬೆ ಸಮಾಚಾರ್

6. ನಾಗಾರ್ಜುನ ಸಾಗರ ವನ್ಯಜೀವಿಧಾಮವು ಇರುವ ರಾಜ್ಯ

(A) ಕರ್ನಾಟಕ

(B) ಕೇರಳ

(C) ಉತ್ತರ ಪ್ರದೇಶ

(D) ತೆಲಂಗಾಣ

7. ಭಾರತದಲ್ಲಿ ಮೂರು ಹಂತದ ಪಂಚಾಯ್ತಿಗಳನ್ನು ಅಸ್ತಿತ್ವಕ್ಕೆ ತಂದ ಸಂವಿಧಾನದ ತಿದ್ದುಪಡಿ

(A) 24ನೇ

(B) 42ನೇ

(C) 73ನೇ

(D) 92ನೇ

8. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ

(A) ಉಳಿತಾಯ ಖಾತೆ

(B) ಚಾಲ್ತಿ ಖಾತೆ

(C) ಆವರ್ತ ಠೇವಣಿ ಖಾತೆ

(D) ನಿಶ್ಚಿತ ಠೇವಣಿ ಖಾತೆ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

9. ವೆಲ್ಲೆಸ್ಲಿಯು ಏಕೆ ತನ್ನ ಹುದ್ದೆಗೆ ರಾಜಿನಾಮೆ ನೀಡಿ ಇಂಗ್ಲೆಂಡಿಗೆ ಮರಳಿದನು ?

10. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರು ?

11. ಪ್ರತಿ ವರ್ಷ ಮಾನವ ಹಕ್ಕುಗಳ ದಿನವನ್ನು ಎಂದು ಆಚರಿಸುತ್ತೇವೆ ?

12. ಜನಮಂದೆ ಎಂದರೇನು ?

13. ಪೂರ್ವ ಮತ್ತು ಪಶ್ಚಿಮ ಘಟ್ಟಗಳು ಎಲ್ಲಿ ಸಂಧಿಸುತ್ತವೆ ?

14. ನದಿಮುಖಜ ಭೂಮಿಗಳಲ್ಲಿ ಕಂಡುಬರುವ ಅರಣ್ಯಗಳ ವಿಧ ಯಾವುದು ?

15. ರಾಷ್ಟ್ರೀಯ ವರಮಾನ ಎಂದರೇನು ?

16. 'ವಿಪ್ರೊ ತಂತ್ರಜ್ಞಾನ' ಸಂಸ್ಥೆಯ ಸ್ಥಾಪಕರು ಯಾರು ?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :** **8 × 2 = 16**

17. ಬಕ್ಸಾರ್ ಕದನದ ಪರಿಣಾಮಗಳೇನು ?

18. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು ಯಾವುವು ?

19. ಪಂಚಶೀಲ ತತ್ವಗಳು ಯಾವುವು ?

*ಅಥವಾ*

ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟವನ್ನು ವಿವರಿಸಿ.

20. ಅಸಂಘಟಿತ ವಲಯದ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳನ್ನು ಪಟ್ಟಿಮಾಡಿ.

*ಅಥವಾ*

ಯಾವುದಾದರೂ ನಾಲ್ಕು ಪರಿಸರ ಚಳವಳಿಗಳನ್ನು ಹೆಸರಿಸಿ.

21. ಭಾರತದ ವಾಯುಗುಣದ ಪ್ರಮುಖ ಋತುಮಾನಗಳಾವುವು ?

22. ಮಣ್ಣಿನ ಸವೆತಕ್ಕೆ ಕಾರಣಗಳೇನು ?

23. ವಸತಿ ಯೋಜನೆಗಳನ್ನು ತಿಳಿಸಿ.

24. ಗ್ರಾಹಕ ರಕ್ಷಣಾ ಕಾಯ್ದೆಯ ಉದ್ದೇಶಗಳೇನು ?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**9 × 3 = 27**

25. ಭಾರತದಲ್ಲಿ ಬ್ರಿಟಿಷ್ ಶಿಕ್ಷಣದ ಪರಿಣಾಮಗಳೇನು ?

26. ಆರ್ಯ ಸಮಾಜದ ಉದ್ದೇಶಗಳೇನು ?

**ಅಥವಾ**

ಭಾರತವು ಸ್ವಾತಂತ್ರ್ಯ ಗಳಿಸಿದ ಸಂದರ್ಭದಲ್ಲಿ ಎದುರಿಸಿದ ಸಮಸ್ಯೆಗಳಾವುವು ?

27. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳೇನು ?

28. ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.

29. ಭಾರತದಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ ಇರುವ ಕಾನೂನು ಕ್ರಮಗಳನ್ನು ಬರೆಯಿರಿ.

30. ಕೈಗಾರಿಕೆಗಳ ಸ್ಥಾನೀಕರಣವನ್ನು ನಿರ್ಧರಿಸುವ ಅಂಶಗಳು ಯಾವುವು ?

***ಅಥವಾ***

ಆವರ್ತ ಮಾರುತಗಳ ಪರಿಣಾಮಗಳನ್ನು ಪಟ್ಟಿ ಮಾಡಿ.

31. ಸಾರಿಗೆಯ ಪ್ರಾಮುಖ್ಯತೆಯೇನು ? ವಿವರಿಸಿ.

32. ಭಾರತದಲ್ಲಿ ಸದ್ಯ ಇರುವ ಲಿಂಗ ತಾರತಮ್ಯದ ಆಯಾಮಗಳನ್ನು ಗುರುತಿಸಿ.

***ಅಥವಾ***

ಭಾರತದಲ್ಲಿ ಅಳವಡಿಸಿಕೊಂಡಿರುವ ಪಂಚಾಯತ್‌ರಾಜ್ ವ್ಯವಸ್ಥೆಯ ಲಕ್ಷಣಗಳನ್ನು ವಿವರಿಸಿ.

33. ಬ್ಯಾಂಕಿನ ಕಾರ್ಯಗಳೇನು ?

**ಅಥವಾ**

ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಯ ಪಾತ್ರವೇನು ?

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**4 × 4 = 16**

34. ದೋಂಢಿಯಾ ವಾಘ್ ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದನು ?

**ಅಥವಾ**

ಸ್ವಾತಂತ್ರ್ಯ ಚಳವಳಿಯಲ್ಲಿ ತೀವ್ರವಾದಿಗಳ ಪಾತ್ರವನ್ನು ವಿವರಿಸಿ.

35. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸರ ಪಾತ್ರವೇನು ?

36. ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಕೈಗೊಂಡಿರುವ ಕ್ರಮಗಳೇನು ?

37. ಭಾರತದಲ್ಲಿ ಅನುಸರಿಸುವ ಕೃಷಿಯ ವಿಧಗಳನ್ನು ಪಟ್ಟಿ ಮಾಡಿ.

**VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : 1 + 4 = 5**

a) $23\frac{1}{2}^{o}$ ಉತ್ತರ ಅಕ್ಷಾಂಶ

b) ಭಾಕ್ರ-ನಂಗಲ್

c) ಕಾವೇರಿ ನದಿ

d) ಮುಂಬೈ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. **5**